3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

**Spl.C. No. 390/2019**

ಪ್ರಾ.ಸಾ 1

ಚಾಸಾ

| | |
|---|---|
| ಹೆಸರು | ಕುಮಾರಯ್ಯ |
| ತಂದೆಯ ಹೆಸರು | ಲೇಟ್ ತಿಗಳಬೋರಯ್ಯ |
| ವಯಸ್ಸು | 50 ವರ್ಷ |
| ಉದ್ಯೋಗ | ಮುಖ್ಯ ಪೇದೆ , ಹೆಬ್ಬೂರು ಪೋ.ಠಾಣೆ |
| ವಾಸಸ್ಥಳ | ತುಮಕೂರು |

ಸಾಕ್ಷಿಯನ್ನು ದಿನಾಂಕ 03.07.2024 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ** (ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಸಾಕ್ಷಿಯ ವಿಚಾರಣೆ)

1) ಮೇ 2022 ರಿಂದ ಹೆಬ್ಬೂರು ಪೋ.ಠಾಣೆಯಲ್ಲಿ ನಾನು ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ.

2) ದಿನಾಂಕ 15.10.2022 ರಂದು ಮಾನ್ಯ ನ್ಯಾಯಾಲಯದಿಂದ ಆರೋಪಿಯ ವಿರುದ್ದ ಹೊರಡಿಸಿರುವ ಉದ್ಘೋಷಣೆ ವಾರಂಟನ್ನು ಪಡೆದುಕೊಂಡಿರುತ್ತೇನೆ. ನಂತರ 20.10.2022 ರಂದು ಆರೋಪಿಯ ವಾಸ ಮಾಡುತ್ತಿದ್ದ ಸೀನಪ್ಪನಹಳ್ಳಿ ಗ್ರಾಮಕ್ಕೆ ಹೋಗಿ ಆರೋಪಿಯ ಮನೆಗೆ ಹೋದಾಗ ಮನೆಗೆ ಬೀಗ ಹಾಕಿತ್ತು. ಅಕ್ಕಪಕ್ಕದ ಮನೆಯವರನ್ನು ವಿಚಾರಿಸಿದಾಗ ಪ್ರಸ್ತುತ ಪ್ರಕರಣ ದಾಖಲಾದ ನಂತರ ಆರೋಪಿಯು

ತಲೆಮರೆಸಿಕೊಂಡಿರುತ್ತಾನೆಂದು ತಿಳಿಸಿರುತ್ತಾರೆ. ನಂತರ ಮಂಜುನಾಥ ಮತ್ತು ನಾರಾಯಣರವರನ್ನು ಪಂಚರಾಗಿ ಬರಮಾಡಿಕೊಂಡು ಅವರ ಸಮಕ್ಷಮ ಗ್ರಾಮದಲ್ಲಿ ಟಾಂ ಟಾಂ ಹೊಡೆಸಿ ಆರೋಪಿಯ ಬಗ್ಗೆ ಕೂಗಿ ಹೇಳಿ ಆರೋಪಿಯ ಮನೆಯ ಗೋಡೆಗೆ ಉದ್ಘೋಷಣಾ ವಾರಂಟ್ ನ ಒಂದು ಪ್ರತಿಯನ್ನು ಅಂಟಿಸಿ, ಗ್ರಾಮದ ಬಸ್ ನಿಲ್ದಾಣದಲ್ಲಿ ಹಾಗೂ ಆಟೋ ನಿಲ್ದಾಣದಲ್ಲಿ ಉದ್ಘೋಷಣಾ ವಾರಂಟ್ ನ ಪ್ರತಿಗಳನ್ನು ಅಂಟಿಸಿರುತ್ತೇನೆ. ನಂತರ ಈ ಬಗ್ಗೆ ಪಂಚರ ಸಮಕ್ಷಮ ಪಂಚನಾಮೆಯನ್ನು ಮಾಡಿಕೊಂಡಿರುತ್ತೇನೆ. ಪಂಚನಾಮೆಯನ್ನು ನಿಪಿ.1, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಆರೋಪಿಯ ಮನೆಯ ಗೋಡೆಗೆ ಉದ್ಘೋಷಣಾ ವಾರಂಟ್ ನ್ನು ಪಂಚರ ಸಮಕ್ಷಮ ಅಂಟಿಸಿರುವ ಬಗ್ಗೆ ಭಾವಚಿತ್ರವನ್ನು ತೆಗೆಸಿರುತ್ತೇನೆ. ಅದನ್ನು ನಿಪಿ.2 ಎಂದು ಗುರುತಿಸಲಾಯಿತು. ನಂತರ ವಾರಂಟ್ ನ್ನು ಪಂಚನಾಮೆಯೊಂದಿಗೆ ನ್ಯಾಯಾಲಯಕ್ಕೆ ಹಿಂದಿರುಗಿಸಿರುತ್ತೇನೆ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ತುಮಕೂರು.

ಸಾಕ್ಷಿಯ ಸಹಿ